# ಸಂಪಾದಕೀಯ

## ಭಾರತೀಯ ಸಮಾಜದಲ್ಲಿ ಸ್ತ್ರೀಯರ ಸ್ಥಾನ

ಒಂದು ಸಂಸ್ಕೃತಿಯ ಘನತೆಯನ್ನು ಅಳೆದು ಅದರ ಗುಣಾವಗುಣಗಳನ್ನು ಪರಿಶೀಲಿಸುವಾಗ ಅದು ಸ್ತ್ರೀಯರಿಗೆ ಯಾವ ಸ್ಥಾನವನ್ನು ನೀಡಿದೆ ಎಂಬುದನ್ನು ಗಮನಿಸಿದರೆ ಸಾಕು. ಉತ್ತಮ ನಡವಳಿಕೆಯನ್ನು ರೂಢಿಸಿಕೊಂಡ ಸಮಾಜವನ್ನು ಸಂಸ್ಕೃತಿಯ ಬೀಡು ಎನ್ನುತ್ತೇವೆ. ಮಾನವನಲ್ಲಿರುವ ಪ್ರಾಣಿ ಸಹಜವಾದ ಬಯಕೆಗಳಿಂದ ಪ್ರೇರಿತವಾದ ನಡತೆಯನ್ನು ಶಿಕ್ಷಣ, ಶಿಸ್ತು ಹಾಗೂ ಕಾನೂನುಗಳ ಮೂಲಕ ಸಂಸ್ಕರಿಸಿ, ಉತ್ತಮ ರೀತಿರಿವಾಜುಗಳನ್ನು ಜಾರಿಗೆ ತಂದಿರುವ ಸಮಾಜವನ್ನು ಅಭಿವೃದ್ಧಿ ಹೊಂದಿದ ಸಮಾಜ, ಸಂಸ್ಕೃತಿಪರ ಸಮಾಜ ಎನ್ನುತ್ತೇವೆ. ಮಾನವನಲ್ಲಿ ಪ್ರಬಲವಾಗಿರುವ ಸ್ವಾರ್ಥಪರ ನಡತೆ, ಕಾಮನೆಗಳನ್ನು ಸಮರ್ಪಕವಾಗಿ ನಿಯಂತ್ರಿಸುವ ಒಂದು ವ್ಯವಸ್ಥೆಯೇ ಸಮಾಜ. ಮೂಲತಃ ಸಮಾಜವು ತನ್ನ ಎಲ್ಲ ಸದಸ್ಯರಿಗೂ ಸಮನಾದ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಆಗ ಅದು ಆರೋಗ್ಯಕರವಾದ ಸಮಾಜವಾಗುತ್ತದೆ. ಪುರುಷ, ಸ್ತ್ರೀ ಎಂಬ ಲಿಂಗಭೇದವನ್ನು ಪ್ರತಿಪಾದಿಸಿ ಅದರ ಆಧಾರದ ಮೇಲೆ ವ್ಯಕ್ತಿಯ ಸ್ಥಾನಮಾನವನ್ನು ನಿರ್ಧರಿಸುವ ಸಮಾಜಗಳು ಅಸ್ಥಿರತೆಯ ನೆಲೆಯಾಗುತ್ತವೆ. ಪುರುಷಪ್ರಧಾನ ಸಮಾಜಗಳು ಮಹಿಳೆಯನ್ನು ಅಬಲೆಯೆಂದು ಕರೆದು, ಅವಳಿಗೆ ಸ್ವಾತಂತ್ರ್ಯ ನೀಡದೆ ಆಕೆ ಎಲ್ಲದಕ್ಕೂ ಪುರುಷನನ್ನು ಅವಲಂಬಿಸುವಂತೆ ಮಾಡುತ್ತವೆ.

ಒಂದಾನೊಂದು ಕಾಲದಲ್ಲಿ ಮಹಿಳೆಯನ್ನು ವಸ್ತುವಿನಂತೆ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳಬಹುದಾಗಿತ್ತು! ಯುದ್ಧಗಳಲ್ಲಿ ಗೆದ್ದರೆ ಸೋತವರ ದೇಶಗಳ ಸ್ತ್ರೀಯರನ್ನೆಲ್ಲ ದಾಸಿಯರನ್ನಾಗಿಸಿಕೊಂಡು ಅವರೊಡನೆ ಹೀನಾಯವಾಗಿ ವರ್ತಿಸುತ್ತಿದ್ದರು. ಜಗತ್ತಿನ ಇತಿಹಾಸದಲ್ಲಿ ಓದಿದರೆ ಇಂತಹ ಅನೇಕ ನಿದರ್ಶನಗಳು ದೊರೆಯುತ್ತವೆ. ನಮ್ಮ ದೇಶದಲ್ಲೂ ಒಂದೆಡೆ ಸ್ತ್ರೀಯನ್ನು ದೇವತೆಯೆಂದು ಕಾಣುವ ಪರಿಪಾಠವಿದ್ದರೆ ಮತ್ತೊಂದೆಡೆ ವರದಕ್ಷಿಣೆಯಂತಹ ಪಿಡುಗಿನ ಹೆಸರಿನಲ್ಲಿ ಅವಳಿಗೆ ಕಿರುಕುಳ ಕೊಡುವುದನ್ನೂ ಕಾಣುತ್ತೇವೆ. ಇಂತಹ ಅಸಂಗತ ವಿಚಾರಗಳು ಎಲ್ಲ ಸಮಾಜಗಳಲ್ಲೂ ಕಂಡುಬರುತ್ತವೆ. ಆದರ್ಶ ಹಾಗೂ ವಾಸ್ತವಗಳ ನಡುವೆ ಇರುವ ಅಜಗಜಾಂತರವೇ ಇದಕ್ಕೆ ಕಾರಣ. ಶೋಷಣೆ, ಅದು ಯಾವುದೇ ರೂಪದಲ್ಲಿರಲಿ, ಸಮಾಜದ ಹಿತಕ್ಕೆ ಮಾರಕವೆಂಬ ಅರಿವು ಮೂಡುವ ತನಕ ಯಾವುದೇ ಸುಧಾರಣೆ ಸಾಧ್ಯವಿಲ್ಲ. ಉತ್ತಮ ಭಾವನೆಗಳು ಹಾಗೂ ವಿಚಾರಗಳು ಸಂಸ್ಕೃತಿಯ ಲಕ್ಷಣವೆಂದಾದರೆ ಅದನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವವರು ತಾಯಂದಿರು. ಮಹಿಳೆಯೇ ಸಂಸ್ಕೃತಿಯ ನಿಜವಾದ ಸಂವಾಹಕಿ. ಆದ್ದರಿಂದ ಸಮಾಜದ ಸುಸ್ಥಿತಿಗೆ ಅವಳ ಕೊಡುಗೆ ಅದ್ವಿತೀಯ.

ಭಾರತೀಯ ಪರಂಪರೆಯಲ್ಲಿ ಸ್ತ್ರೀಯರಿಗೆ ಮೊದಲಿನಿಂದಲೂ ಅತ್ಯಂತ ಗೌರವದ ಸ್ಥಾನವಿತ್ತು. ಇದನ್ನು ಸಮರ್ಥಿಸಲು ಅನೇಕ ಪುರಾವೆಗಳು ದೊರೆತಿವೆ. ಪುರಾಣಗಳಲ್ಲಿ, ಉಪನಿಷತ್ತುಗಳಲ್ಲಿಯೂ ಸ್ತ್ರೀಯರ ಅಸಾಧಾರಣ ವಿದ್ಯೆ, ಕಲೆ ಹಾಗೂ ಸಾಮರ್ಥ್ಯಗಳನ್ನು ಕೊಂಡಾಡಲಾಗಿದೆ. ಭಾರತದ ಸ್ತ್ರೀಯರು ಸದಾ ಶೋಷಿತರು ಎಂಬ ಭಾವನೆ ಅನೇಕರಿಗಿದೆ. ಇದು ಸರಿಯಲ್ಲ. ಇಂದಿನ ದಿನಗಳಲ್ಲಿ ತನ್ನ ಆಧುನಿಕ ಮನೋಭಾವನೆ ಹಾಗೂ ಸ್ವತಂತ್ರ ಜೀವನ ಶೈಲಿಗೆ ಪ್ರಸಿದ್ಧವಾಗಿರುವ ಪಾಶ್ಚಾತ್ಯ ರಾಷ್ಟ್ರಗಳಲ್ಲಿ, ಕೆಲವೇ ಶತಮಾನಗಳ ಹಿಂದೆ ಸ್ತ್ರೀಯರಿಗೆ ಯಾವ ಸ್ಥಾನ ಇತ್ತು? ಹದಿನಾರನೆಯ ಶತಮಾನದವರೆಗೂ ಯಾವುದೇ ಒಂದು ಗಣನೀಯ ಸಾಧನೆಯನ್ನು ಮಾಡಿದ ಮಹಿಳೆಯ ಉಲ್ಲೇಖವನ್ನು ನಾವು ಆ ಸಮಾಜಗಳಲ್ಲಿ ಕಾಣುವುದಿಲ್ಲ! ಎಲ್ಲೋ ಒಂದೆರಡು ಹೆಸರುಗಳನ್ನು ಉಲ್ಲೇಖಿಸಬಹುದು ಅಷ್ಟೆ. ಇದಕ್ಕೆ ಕಾರಣ ಇಲ್ಲದಿಲ್ಲ. ಕ್ರೈಸ್ತ ಹಾಗೂ ಯಹೂದ್ಯ ಧಾರ್ಮಿಕ ಸಂಪ್ರದಾಯಗಳಲ್ಲಿ ಸ್ತ್ರೀಯರೇ ಎಲ್ಲ ಅನಿಷ್ಟಕ್ಕೆ ಕಾರಣವೆಂಬ ನಂಬಿಕೆಯಿತ್ತು. ಸಾಕ್ರೆಟಿಸ್ ಒಂದೆಡೆ ಹೇಳುತ್ತಾನೆ: "ಎಲ್ಲ ಕೆಡುಕಿನ ಮೂಲವೇ ಸ್ತ್ರೀ. ಗಂಡಸಿನ ದ್ವೇಷಕ್ಕಿಂತಲೂ ಹೆಂಗಸಿನ ಪ್ರೇಮ ಹಾನಿಕರ. ಮದುವೆಯ ಮೂಲಕ ಮಹಿಳೆಯರ ಸಂಗವನ್ನು ಬಯಸುವ ಬಡಪಾಯಿ ಯುವಕರು ಗಾಳವನ್ನು ನುಂಗಲು ಹಾತೊರೆಯುವ ಮೀನುಗಳಂತೆ." ಕ್ರೈಸ್ತ ಸಂತರೂ ಸಹ ಇಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಏಸುಕ್ರಿಸ್ತನು ಎಂದೂ ಸ್ತ್ರೀಯರನ್ನು ದೂರಲಿಲ್ಲವಾದರೂ ಅವನ ಅನುಯಾಯಿಗಳು ಮಹಿಳೆಯರ ಬಗ್ಗೆ ಬಹಳ ಕಟುವಾಗಿ ನುಡಿದಿದ್ದಾರೆ. ಸಂತ ಪಾಲ್ ಹೇಳುತ್ತಾನೆ: "ಪುರುಷನು ಮಹಿಳೆಯನ್ನು ಮುಟ್ಟದಿರುವುದೇ ಉತ್ತಮ. ಮದುವೆಯೆನ್ನುವುದು ಒಂದು ಅವನತಿ, ವ್ಯಭಿಚಾರವನ್ನು ತಪ್ಪಿಸಲು ಅದೊಂದು ರಿಯಾಯಿತಿ." ಆದಮ್‌ನನ್ನು ಪ್ರಚೋದಿಸಿ, ದೇವರಿಂದ ಅವನನ್ನು ದೂರಮಾಡಿ, ಮೂಲ ಪಾಪಕ್ಕೆ ಕಾರಣಳಾದ ಈವ್ ಎಲ್ಲ ಸ್ತ್ರೀಯರ ಪ್ರತಿನಿಧಿ ಎಂದೇ ಇವರು ಭಾವಿಸಿದರು. ಹನ್ನೊಂದನೆಯ ಶತಮಾನದ ರೆನೆ ಎಂಬ ಬಿಷಪ್ ಸ್ಪಷ್ಟವಾಗಿ ಹೇಳುತ್ತಾನೆ: "ಸೈತಾನನ ರಾಜ್ಯಕ್ಕೆ ಕೊಂಡೊಯ್ಯುವ ಹೆಬ್ಬಾಗಿಲೇ ಸ್ತ್ರೀ. ಆಕೆ ದೇವರ ಪ್ರತಿಬಿಂಬನಾದ ಪುರುಷನನ್ನು ಹಾಳು ಮಾಡಿದಳು. ಈವ್ ಮಾಡಿದ ಪಾಪವನ್ನು ಕುರಿತು ಪರಿಭಾವಿಸಿ ಎಲ್ಲ ಸ್ತ್ರೀಯರೂ ತಲೆತಗ್ಗಿಸಲಿ." (J.L. Davies: A Short History of Women, ಅಧ್ಯಾಯ ನಾಲ್ಕು.)

ಭಾರತದಲ್ಲಿ ಪರಿಸ್ಥಿತಿ ಹೀಗಿರಲಿಲ್ಲ. ವೇದ, ಉಪನಿಷತ್ತುಗಳ ಕಾಲದಲ್ಲಿ ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಲಾಗುತ್ತಿತ್ತು ಹಾಗೂ ಸಮಾಜದ ಎಲ್ಲ ಜವಾಬ್ದಾರಿಗಳಲ್ಲೂ ಪಾಲ್ಗೊಳ್ಳಲು ಅವರಿಗೆ ಮುಕ್ತ ಅವಕಾಶವಿರುತ್ತಿತ್ತು. ಬೃಹದಾರಣ್ಯಕದ ( III. ೨೩; VI. ೧೧) ಒಂದು ಮಂತ್ರ ಹೀಗಿದೆ: **ಅಥ ಯ ಇಚ್ಛೇದ್ ದುಹಿತಾ ಮೇ ಪಂಡಿತಾ ಜಾಯೇತ, ತಿಲೌದನೌ ಪಾಚಯಿತ್ವಾ ಅಶ್ನೀಯಾತಾಮಿತಿ।** "ಪಂಡಿತಳಾದ ಮಗಳನ್ನು ಪಡೆಯಲು ಗೃಹಸ್ಥನು ......... ಈ ವಿಧಾನಗಳನ್ನು ಆಚರಿಸಲಿ." 'ಸಂಯುತ್ತ ನಿಕಾಯ' ದಲ್ಲಿ (III. ೨, ೬) ಹೇಳಿದೆ, "ಕುಶಲಮತಿಯೂ ಉತ್ತಮ ನಡತೆಯೂ ಉಳ್ಳ ಮಗಳು ಮಗನಿಗಿಂತ ಉತ್ತಮ. ಕಾಳಿದಾಸನ ಕುಮಾರಸಂಭವದಲ್ಲಿ ( VI. ೬೩) ಕವಿ ಕಾಳಿದಾಸ ಹೇಳುತ್ತಾನೆ, **'ಕನ್ಯೇಯಂ ಕುಲಜೀವಿತಮ್!'** – "ಮಗಳು ಕುಲದ ಗೌರವವನ್ನು ಎತ್ತಿ ಹಿಡಿಯುವಳು ಹಾಗೂ ಅದಕ್ಕೆ ಅವಳೇ ಜೀವ."

ವೇದಗಳನ್ನು ಕಲಿತು ಯಜ್ಞಯಾಗಾದಿಗಳಲ್ಲಿ ಭಾಗವಹಿಸುವ ಹಕ್ಕು ಹೆಣ್ಣುಮಕ್ಕಳಿಗೂ ಇತ್ತು. ತನ್ನ ಪತಿಯನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವೂ ಕನ್ಯೆಯರಿಗಿತ್ತು. ಮರುವಿವಾಹ ಪದ್ಧತಿಯೂ ಅನೇಕ ಪಂಗಡಗಳಲ್ಲಿ ಇದ್ದದ್ದರಿಂದ ವಿಧವೆಯರ ಜೀವನ ಅಂಥ ಕಷ್ಟಕರವಾಗಿರಲಿಲ್ಲ. ಸ್ತ್ರೀಯರನ್ನು ರಕ್ಷಿಸಿ ಕಾಪಾಡುವುದು ಸಮಾಜದ ಎಲ್ಲರ ಹೊಣೆಯಾಗಿತ್ತು. ಮನುಸ್ಮೃತಿಯಲ್ಲಿ (IX. ३–४) ಬರುವ ಈ ಶ್ಲೋಕಗಳು ಆಗಿನ ಕಾಲದಲ್ಲೂ ಸ್ತ್ರೀಯರಿಗೆ ಇದ್ದ ಗೌರವವನ್ನು ಸೂಚಿಸುತ್ತವೆ:

**ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ।**
**ರಕ್ಷತಿ ಸ್ಥವಿರೇ ಪುತ್ರಾ ನ ಭಜೇತ್ ಸ್ತ್ರೀ ಸ್ವತಂತ್ರತಾಮ್ ॥**
**ಕಾಲೇಽದಾತಾ ಪಿತಾ ವಾಚ್ಯೋ ವಾಚ್ಯಶ್ಚಾನುಪಯನ್ಪತಿಃ ।**
**ಮೃತೇ ಭರ್ತರಿ ಪುತ್ರಸ್ತು ವಾಚ್ಯೋ ಮಾತುರಕ್ಷಿತಾ ॥**

"ಕನ್ಯೆಯನ್ನು ತಂದೆ ರಕ್ಷಿಸಬೇಕು, ಆಕೆಯ ಯೌವನದಲ್ಲಿ ಪತಿಯು ಆಕೆಯನ್ನು ರಕ್ಷಿಸಬೇಕು. ಪತಿಯು ತೀರಿಕೊಂಡ ಬಳಿಕ ಮಕ್ಕಳು ಕಾಪಾಡಬೇಕು. ಮಹಿಳೆಯು ಏಕಾಂಗಿಯಾಗಿ (ರಕ್ಷಣೆಯಿಲ್ಲದೆ) ಇರಬಾರದು. ಸರಿಯಾದ ವಯಸ್ಸಿಗೆ ಮಗಳ ಮದುವೆಯನ್ನು ಮಾಡದಿದ್ದರೆ ತಂದೆ ದೂಷಿತನಾಗುತ್ತಾನೆ. ಪತ್ನಿಯನ್ನು ಸರಿಯಾಗಿ ನೋಡಿಕೊಳ್ಳದ ಪತಿಯು ದೂಷಿತನಾಗುತ್ತಾನೆ. ವಯಸ್ಸಾದ ತಾಯಿಯನ್ನು ನೋಡಿಕೊಳ್ಳದ ಮಗ ನಿಂದನೀಯನು." ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಸ್ತ್ರೀಗೆ ರಕ್ಷಣೆ ನೀಡುವುದರ ಹಿನ್ನೆಲೆಯಲ್ಲಿ ಅವಳ ಅಸಹಾಯಕತನವನ್ನು ಯಾರೂ ದುರುಪಯೋಗಪಡಿಸಿಕೊಳ್ಳಬಾರದು ಎಂಬ ಕಾಳಜಿ ಇದೆ. ಮಹಾಭಾರತದಲ್ಲಿ (I. ೧೬೨. ೧೨) ಒಬ್ಬಳು ಮಹಿಳೆ ಹೇಳುತ್ತಾಳೆ: **ಅನಾಥತ್ವಂ ಸ್ತ್ರಿಯೋ ದ್ವಾರಂ ದುಷ್ಟಾನಾಂ ವಿವೃತಂ ಹಿ ತತ್ ॥**–"ರಕ್ಷಕನಿಲ್ಲದೆ ಈ ಪ್ರಪಂಚದಲ್ಲಿ ಮಹಿಳೆಯಿರಬಾರದು. ಅದು ಅನಾಹುತಕ್ಕೆ ಕಾರಣವಾಗುತ್ತದೆ. ಏಕೆಂದರೆ ಈ ಜಗತ್ತಿನಲ್ಲಿ ದುಷ್ಟತನ ತುಂಬಿದೆ." ಕಾಮುಕ ಪುರುಷನಿಂದಾಗಬಹುದಾದ ತೊಂದರೆಯನ್ನು ಈ ಮಾತು ಸಮರ್ಪಕವಾಗಿ ಎತ್ತಿ ತೋರಿಸುತ್ತದೆ. ತನ್ನ ದೋಷವನ್ನು ಮುಚ್ಚಿಕೊಳ್ಳುವ ಸಲುವಾಗಿ ಪುರುಷನು ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ನಿರಾಕರಿಸಿದರೆ ಅದು ಅಮಾನವೀಯವಲ್ಲವೆ?

ಪುರಾಣಗಳ ಕಾಲದಲ್ಲಿ ಮನೆತನದ ಎಲ್ಲ ಆಗುಹೋಗುಗಳನ್ನು ನೋಡಿಕೊಂಡು, ಅತಿಥಿ ಸತ್ಕಾರ, ಧಾರ್ಮಿಕ ಕ್ರಿಯೆಗಳಿಗೆ ಸಹಕರಿಸುವುದು – ಇವೆಲ್ಲ ಮಹಿಳೆಯರ ಜವಾಬ್ದಾರಿಯಾಗಿತ್ತು. ತಂದೆ ತೀರಿಕೊಂಡರೆ ಮಕ್ಕಳನ್ನು ಇತರ ಬಂಧುಗಳ ವಶಕ್ಕೆ ಬಿಡದೆ ತಾಯಿಯೇ ಅವರನ್ನು ನೋಡಿಕೊಳ್ಳಬೇಕಿತ್ತು. ಇದನ್ನು ಕುಂತಿಯ ನಿದರ್ಶನದಲ್ಲಿ ಕಾಣುತ್ತೇವೆ. ಸೀತೆಯೂ ಕೂಡ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿ, ಉತ್ತಮ ವ್ಯಕ್ತಿಗಳನ್ನಾಗಿ ಬೆಳೆಸಿದಳು. ಮಹಿಳೆಗೆ ಮನೆತನದಲ್ಲಿ ಅತಿ ಗೌರವದ ಸ್ಥಾನವಿತ್ತು. ತಾಯಿಯ ಬಗ್ಗೆ ಬಹಳ ಹಿಂದಿನಿಂದಲೂ ಭಾರತೀಯ ಸಮಾಜದಲ್ಲಿ ಶ್ರದ್ಧೆಯಿದೆ. ತಾಯ್ತನದ ಪ್ರತೀಕವಾದ ಮಹಿಳೆಯರೆಲ್ಲರೂ ಗೌರವಾರ್ಹರು ಎಂಬ ಭಾವ ಕ್ರಮೇಣ ಬೆಳೆಯಿತು. ದೇವೀ ಮಾಹಾತ್ಮ್ಯದಲ್ಲಿ **ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ** – "ಯಾವ ದೇವಿಯು ಎಲ್ಲ ಜೀವಿಗಳಲ್ಲಿಯೂ ತಾಯಿಯಾಗಿ (ಮಾತೃವಾತ್ಸಲ್ಯವಾಗಿ) ನೆಲೆಸಿರುವಳೋ" ಎಂದು ಹೇಳಲಾಗಿದೆ. ಹೀಗೆ ತಾಯಿಯನ್ನು ದೇವರ ಸ್ಥಾನಕ್ಕೆ ಏರಿಸುವುದರ ಮೂಲಕ, ಸ್ತ್ರೀಯು ಭಾರತೀಯ ಸಮಾಜದ ಸೂತ್ರಧಾರಿಣಿಯಾದಳು ಎಂದರೆ ತಪ್ಪಾಗಲಾರದು.

ಮಹಾಭಾರತವು ( XII. ೨೬೬–೨೮) ಹೇಳುವ ಹಾಗೆ ಮಕ್ಕಳಿಗೆ ತಾಯಿಯು ಸಾಕ್ಷಾತ್ ದೇವತೆ. "ಮಗನು ತಾಯಿಗೆ ಮಗುವಿದ್ದ ಹಾಗೆ. ಅವನಿಗೇ ಮಕ್ಕಳು, ಮೊಮ್ಮಕ್ಕಳು ಇದ್ದರೂ, ನೂರು ವರ್ಷ ಕಳೆದ ಮೇಲೆ ಕೂಡ ತನ್ನ ತಾಯಿಯ ಬಳಿಗೆ ಬಂದಾಗ ಅವನು ಎರಡು ವರ್ಷದ ಮಗು ಇದ್ದಂತೆಯೆ." ಗುರುವಿಗಿಂತಲೂ, ತಂದೆಗಿಂತಲೂ ಹೆಚ್ಚಾಗಿ ತಾಯಿ ಗೌರವಕ್ಕೆ ಪಾತ್ರಳು ಎಂದು ವಸಿಷ್ಠನು (ಮಹಾಭಾರತ XIII.೪೭) ಹೇಳುತ್ತಾನೆ.

ಋಗ್ವೇದದ ಮಂತ್ರಗಳು ಉದಾತ್ತ ಸ್ತ್ರೀಯರ ವ್ಯಕ್ತಿಚಿತ್ರಗಳನ್ನು ನೀಡುತ್ತವೆ. ವೇದಯುಗದಲ್ಲಿ ದ್ರಷ್ಟಾರರಾಗಿ, ಯಜ್ಞಕರ್ತೃಗಳಾಗಿ ಉನ್ನತ ಸ್ಥಾನವನ್ನು ಪಡೆದಿದ್ದ ಅವರಲ್ಲಿ ಧೈರ್ಯ, ಸ್ವಾತಂತ್ರ್ಯ, ಸ್ತ್ರೀ ಸಹಜ ವಾತ್ಸಲ್ಯ, ದಾಂಪತ್ಯ ನಿಷ್ಠೆಗಳು ಕಂಡುಬರುತ್ತವೆ. ಯುದ್ಧಗಳಲ್ಲಿ ಭಾಗವಹಿಸುತ್ತಿದ್ದ ಮಹಿಳೆಯರ ಚಿತ್ರಣದೊಂದಿಗೆ

ರಾಜ್ಯದ ಆಗುಹೋಗುಗಳಲ್ಲಿ, ಅಧ್ಯಾತ್ಮದ ಚರ್ಚೆಗಳಲ್ಲಿ ಭಾಗವಹಿಸುವ, ನ್ಯಾಯಪರ ತೀರ್ಪುಗಳನ್ನು ನೀಡುವ ಮಹಿಳೆಯರ ಚಿತ್ರಣವೂ ಇದೆ. ಸಂನ್ಯಾಸವನ್ನು ಮಹಿಳೆಯರು ಸ್ವೀಕರಿಸುತ್ತಿದ್ದರೆಂಬ ಉಲ್ಲೇಖವೂ ಕ್ವಚಿತ್ತಾಗಿ ಕಂಡುಬರುತ್ತದೆ. ಬುದ್ಧನ ಕಾಲದಲ್ಲಿಯೂ ಸಾವಿರಾರು ಜನ ಭಿಕ್ಷುಣಿಯರಿದ್ದರು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಪಾಶ್ಚಾತ್ಯರ ಅರ್ಥದಲ್ಲಿ ಸಮಾನತೆಯನ್ನು ಭಾರತೀಯ ಮಹಿಳೆ ಬಯಸಲಿಲ್ಲ. ಅದು ಕೇವಲ ಹಕ್ಕುಗಳ ಸಮಾನತೆ. ಜೀವನವೆಂಬುದು ಆಧ್ಯಾತ್ಮಿಕ ಪ್ರಗತಿಗಾಗಿಯೇ ಹೊರತು ಇತರರ ಮೇಲೆ ಹಕ್ಕುಗಳನ್ನು ಸ್ಥಾಪಿಸಿ ಐಹಿಕ ಸಂಪತ್ತು ಸುಖಗಳನ್ನು ತುಂಬಿಕೊಳ್ಳುವುದಕ್ಕಲ್ಲ ಎಂಬ ಭಾವನೆ ಭಾರತೀಯರದ್ದು. ಕೆಲವೊಮ್ಮೆ ಪಾಲನೆಯಾಗದೆ ಹೋಗಿದ್ದರೂ ಭಾರತ ಯಾವಾಗಲೂ ಅತ್ಯುನ್ನತ ಆಧ್ಯಾತ್ಮಿಕ ಹಾಗೂ ನೈತಿಕ ತತ್ತ್ವಗಳಾದ ಸಮಾನತೆ, ಸಹೋದರತ್ವ, ವಿಶ್ವಪ್ರೇಮಗಳನ್ನು ಎತ್ತಿಹಿಡಿದಿದೆ. ಹೀಗಾಗಿ ಭಾರತೀಯ ಸಂಪ್ರದಾಯದಲ್ಲಿ ಮನುಷ್ಯ ಮನುಷ್ಯರಲ್ಲಿ ಭೇದವಿಲ್ಲ. ಪುರುಷನಿಗೂ ಸ್ತ್ರೀಗೂ ವ್ಯತ್ಯಾಸವಿದೆ ಎಂಬುದನ್ನು ನಮ್ಮ ಯಾವ ಧಾರ್ಮಿಕ ಗ್ರಂಥಗಳೂ ಪ್ರತಿಪಾದಿಸಿಲ್ಲ. **ಸರ್ವಂ ಖಲ್ವಿದಂ ಬ್ರಹ್ಮ – ಎಲ್ಲವೂ ಬ್ರಹ್ಮವೇ, ತ್ವಂ ಸ್ತ್ರೀ ತ್ವಂ ಪುಮಾನಸಿ ತ್ವಂ ಕುಮಾರ ಉತ ವಾ ಕುಮಾರೀ** ಎಂಬ ಶ್ವೇತಾಶ್ವತರ ಉಪನಿಷತ್ತಿನ ಮಂತ್ರ (IV. 3) ಹೇಳುತ್ತದೆ: "ನೀನು ಸ್ತ್ರೀಯಾಗಿದ್ದೀಯೆ, ಪುರುಷನಾಗಿದ್ದೀಯೆ, ನೀನೇ ಯುವಕನಂತೆ ತೋರುವೆ, ಮತ್ತೆ ಯುವತಿಯ ರೂಪದಲ್ಲೂ ನೀನೇ ಇರುವೆ" ಇದೇ ಇಲ್ಲಿನ ಮತ. ಆದ್ದರಿಂದಲೇ ಭಾರತದ ಆದರ್ಶಗಳು ಸ್ತ್ರೀಪುರುಷರಿಗೆ ಸಮಾನವಾಗಿವೆ.

ಆಧುನಿಕ ಕಾಲದ ಭಾರತೀಯ ಮಹಿಳೆ ಹಿಂದೆಂದೂ ಇಲ್ಲದ ರೀತಿಯಲ್ಲಿ ಭ್ರಮಿತಳಾಗಿ ನಿಂತಿದ್ದಾಳೆ. ಮಧ್ಯಯುಗದಲ್ಲಿ ದಂಡೆತ್ತಿ ಬಂದ ಹೊರಗಿನ ಸಂಸ್ಕೃತಿಗಳಿಂದ ಭಾರತದ ಮಹಿಳೆಯ ಸ್ಥಾನ ಅಧೋಗತಿಗೆ ಇಳಿಯಿತು ಎಂಬುದು ನಿಸ್ಸಂದೇಹ. ವೈರಿಗಳಿಂದ ಮಹಿಳಾ ಸಮುದಾಯವನ್ನು ಕಾಪಾಡುವ ಸಲುವಾಗಿ ಪರ್ದಾ ಪದ್ಧತಿ, ಸತೀದಹನಗಳೇ ಮೊದಲಾದ ನಿಂದಾಸ್ಪದ ಆಚರಣೆಗಳು ಪ್ರಾರಂಭಗೊಂಡವು. ಆದರೆ ಈಗ ಪಾಶ್ಚಾತ್ಯ ಭಾವನೆಗಳನ್ನು ಅನುಕರಿಸುತ್ತ, ಸಾಂಪ್ರದಾಯಿಕವಾದುದನ್ನೆಲ್ಲ ತಿರಸ್ಕರಿಸುವ ಮನೋಭಾವ ಆಧುನಿಕ ಮಹಿಳೆಯರಲ್ಲಿ ಕಂಡುಬರುತ್ತಿದೆ. ಪ್ರಾಚೀನ ಆದರ್ಶಗಳಾದ ಆಧ್ಯಾತ್ಮಿಕತೆ, ಕೌಟುಂಬಿಕತೆ, ಸಹಬಾಳ್ವೆ – ಇವೆಲ್ಲ ಹಳೆಯ ಕಗ್ಗವೆಂದು ತಿರಸ್ಕೃತವಾಗುತ್ತಿವೆ. ಸ್ವಚ್ಛಂದತೆಯೇ ಸ್ವಾತಂತ್ರ್ಯವೆಂಬ ತಪ್ಪು ಭಾವನೆ ಬೇರೂರುತ್ತಿದೆ. ಎಲ್ಲ ರಂಗಗಳಲ್ಲಿಯೂ ಮಹಿಳೆ ಪ್ರಗತಿಯನ್ನು ಸಾಧಿಸಿ, ತನ್ನ ಪ್ರಕೃತಿದತ್ತ ವರಗಳಾದ ತಾಯ್ತನ, ವಾತ್ಸಲ್ಯ, ಅನುಕಂಪೆ ಹಾಗೂ ಸಹನೆಗಳನ್ನು ಅವಳು ತೊರೆದು ಪುರುಷನಿಗೆ ಸಮಾನವಾಗಲು ಬಯಸಿದರೆ ಆಭಾಸವಾಗುವುದು ನಿಶ್ಚಿತ. ಭಾರತದ ಮಹಿಳೆಯರು ತಮ್ಮ ಅಂತರ್ಗತ ಆಧ್ಯಾತ್ಮಿಕತೆ ಹಾಗೂ ಕೋಮಲತೆಗಳ ಮೂಲಕ ದೈವೀ ಸ್ವರೂಪವನ್ನು ಪ್ರಕಟಗೊಳಿಸುವ ಬೆಳಕಾಗಿ ಉಳಿಯಬೇಕು, ಬೆಳೆಯಬೇಕು.

ನವರಾತ್ರಿಯ ಶುಭಸಮಯದಲ್ಲಿ ದುಷ್ಟ ಶಕ್ತಿಗಳನ್ನು ದಮನ ಮಾಡಿ ತಾಯಿ ದುರ್ಗೆ ಎಲ್ಲರನ್ನೂ ಕಾಪಾಡುವಳು. ಮಾನವನಲ್ಲಿರುವ ಪಾಶವೀ ಕಾಮದೃಷ್ಟಿಯ ಸಂಕೇತವೇ ಮಹಿಷಾಸುರ. ತಾಯ್ತನದ ಪ್ರತೀಕಳಾದ ದೇವಿಯು ಮಾನವನಲ್ಲಿ ಅರಿವು ಮೂಡಿಸಿ ಆತನು ಉನ್ನತ ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯುವಂತೆ ಮಾಡುತ್ತಾಳೆ. ದುರ್ಗೆಯ ಪ್ರಸಾದದಿಂದ ಲಕ್ಷ್ಮಿ, ಸರಸ್ವತಿಯರು, ಒಲಿಯುತ್ತಾರೆ; ಗಣಪನೂ ವಿಘ್ನಗಳನ್ನು ನಿವಾರಿಸುತ್ತಾನೆ. ನವರಾತ್ರಿಯು ಮಹಿಳೆಯ ದೈವೀಗುಣಗಳನ್ನು ಕೊಂಡಾಡುವ ಕಾಲ. ಅವಳ ರಕ್ಷಣೆಯಲ್ಲಿ ಸಮೃದ್ಧಿಯನ್ನು ಕಾಣುವ ಕಾಲ. ಇಂತಹ ದಿವ್ಯ ಹಾಗೂ ಅನನ್ಯ ಆಚರಣೆಯಿರುವ ಭಾರತೀಯ ಸಮಾಜವು ಮಹಿಳಾ ದೌರ್ಜನ್ಯವನ್ನು, ಸ್ತ್ರೀಶೋಷಣೆಯನ್ನು ಉಳಿಸಿಕೊಂಡಿರುವುದು ಖಂಡನೀಯ. ಮಹಿಳೆಯರಿಗೆ ಶಿಕ್ಷಣ ನೀಡಿ ಅವರ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳಲು ಅವರಿಗೇ ಅವಕಾಶ ಕಲ್ಪಿಸಿಕೊಟ್ಟರೆ, ಆಗ ಭಾರತೀಯ ಸಮಾಜವು ಪೂರ್ಣ ಅಭಿವೃದ್ಧಿ ಹೊಂದುವುದರಲ್ಲಿ ಸಂದೇಹವಿಲ್ಲ.

## ಆಶ್ರಮದ ವಿಶೇಷ ಕಾರ್ಯಕ್ರಮಗಳು

### ಅಕ್ಟೋಬರ್ 2007

| | | |
|---|---|---|
| 04 | ಗುರುವಾರ | ಸ್ವಾಮಿ ಅಭೇದಾನಂದ ಜಯಂತಿ |
| 06 | ಶನಿವಾರ | ಏಕಾದಶಿ |
| 11 | ಗುರುವಾರ | ಸ್ವಾಮಿ ಅಖಂಡಾನಂದ ಜಯಂತಿ |
| 18 | ಗುರುವಾರ | ದುರ್ಗಾಪೂಜಾ ಮಹಾಸಪ್ತಮಿ |
| 19 | ಶುಕ್ರವಾರ | ದುರ್ಗಾಪೂಜಾ ಮಹಾಷ್ಟಮಿ |
| 20 | ಶನಿವಾರ | ದುರ್ಗಾಪೂಜಾ ಮಹಾನವಮಿ |
| 21 | ಭಾನುವಾರ | ವಿಜಯದಶಮಿ / ಮಧ್ವಜಯಂತಿ |
| 22 | ಭಾನುವಾರ | ಏಕಾದಶಿ |

ಪ್ರತಿ ಭಾನುವಾರ ಕನ್ನಡದಲ್ಲಿ ಮತ್ತು ಶನಿವಾರ ಇಂಗ್ಲಿಷಿನಲ್ಲಿ ಸಂಜೆ **6 ರಿಂದ 7 ರವರೆಗೆ** ಆಶ್ರಮದ ಸಭಾಂಗಣದಲ್ಲಿ ಪ್ರವಚನಗಳಿರುತ್ತವೆ.